ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-2, September-October 2026, Pp. 55-60
©*IIMRD*, Mysuru
www.iimrd.com

ಕಲ್ಲಕೆಳಗು ನಾಡಿನ ದಾನ–ದತ್ತಿ ಶಾಸನಗಳು

ಚನ್ನಾರಡ್ಡಿ
ಸಂಶೋಧನಾ ವಿದ್ಯಾರ್ಥಿ, ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಾರಾಂಶ: (Abstract)

ಒಂದು ಪ್ರದೇಶದ ಅಧಿಕೃತ ಮಾಹಿತಿಯನ್ನು ತಿಳಿಯಲು ಅಲ್ಲಿ ದೊರೆಯುವ ಶಾಸನಗಳು, ಸಾಹಿತ್ಯ ಗ್ರಂಥಗಳು, ನಾಣ್ಯಗಳು ಹಾಗೂ ಇನ್ನಿತರ ಪಳಿಯುಳಿಕೆಗಳು ಮುಖ್ಯ ಆಧಾರಗಳಾಗುತ್ತವೆ. ಇವುಗಳಲ್ಲಿ ಶಾಸನಗಳು ಹೆಚ್ಚು ಖಚಿತತೆಯನ್ನು ಹೊಂದಿರುತ್ತವೆ. ಶಾಸನಗಳು ಭೌಗೋಳಿಕ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಿವರಣೆಯನ್ನು ತಿಳಿಸುತ್ತವೆ. ಸಾಮಾನ್ಯವಾಗಿ ದೀರ್ಘಕಾಲ ಉಳಿಯುವಂತಹ ಕಠಿಣ ಶಿಲೆಗಳ ಮೇಲೆ ಕೊರೆಯಲಾದ ಬರಹಗಳೇ ಶಾಸನಗಳು. ಆದೇಶ, ಪ್ರಚಾರ, ಕೀರ್ತಿ ಪ್ರಾಪ್ತಿಗಾಗಿ ಶಾಸನಗಳನ್ನು ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಹಾಕಿಸಲಾಗುತ್ತದೆ. ಶಾಸನಗಳನ್ನು ಅವು ಒಳಗೊಂಡಿರುವ ವಿಷಯದ ಆಧಾರದ ಮೇಲೆ, ರೇಖಾಚಿತ್ರಗಳ ಆಧಾರಗಳಿಂದ ವಿಂಗಡಿಸಲಾಗುತ್ತದೆ. ಕರ್ನಾಟಕದಲ್ಲಿ ಇದುವರೆಗೆ ದೊರೆತ ಶಾಸನಗಳಲ್ಲಿ ದಾನ ಶಾಸನಗಳೇ ಹೆಚ್ಚಿನವು. ದಾನಗಳಲ್ಲಿ ಭೂಮಿದಾನ, ಹಣದಾನ, ಕನ್ಯಾದಾನ, ಗೋದಾನ, ಶಾಸ್ತ್ರದಾನ, ತೋಟದಾನ, ತೆರಿಗೆದಾನ, ಅನ್ನದಾನ ಎಂದು ಹದಿನಾರು ಪ್ರಕಾರಗಳಾಗಿ ಗುರುತಿಸಲಾಗುತ್ತದೆ. ಪ್ರಸ್ತುತ ಲೇಖನದಲ್ಲಿ ಕಲ್ಲಕೆಳಗು ನಾಡಿನ ದಾನ–ದತ್ತಿ ಶಾಸನಗಳನ್ನು ಅಧ್ಯಯನ ಮಾಡಲಾಗಿದೆ.

ಮುಖ್ಯಪದಗಳು (Keywords): *ಕನ್ನಡ ಸಾಹಿತ್ಯ, ಶಾಸನ ಅಧ್ಯಯನ, ದಾನ–ದತ್ತಿ ಶಾಸನ, ಕಲ್ಲಕೆಳಗು*

ಪೀಠಿಕೆ

ದಾನ ಎಂದರೆ ಕಾಣಿಕೆ, ಉಡುಗೊರೆ, ದೇವರಿಗೆ ಸಲ್ಲಿಸುವ ವಸ್ತು ಮತ್ತು ಚತುರೋಪಾಯಗಳಲ್ಲಿ ಒಂದು ಎಂಬ ಅರ್ಥಗಳನ್ನು ಹೊಂದಿದೆ. ಜೈನಧರ್ಮದ ಪ್ರಕಾರ ದಾನವನ್ನು "ಪ್ರತಿಯೊಬ್ಬ ಶ್ರಾವಕನೂ ಮಾಡಬೇಕಾದ ಒಂದು ವ್ರತವಾಗಿದೆ". ಹಿಂದೂಗಳಲ್ಲಿ "ದಾನ ಮಾಡಿದವನಿಗೆ ಸ್ವರ್ಗ, ದಾನ ನೀಡದವನಿಗೆ ಸ್ವರ್ಗ ಪ್ರಾಪ್ತಿಯಾಗದು" ಎಂಬ ನಂಬಿಕೆಗಳಿವೆ. ದಾನಗಳು ಸಮಾಜದಲ್ಲಿ ಸಾಮಾಜಿಕ ಸ್ಥಿರತೆಯ ಧೋರಣೆಯನ್ನು ಹೊಂದಿದ್ದವು. ದಾನ ಎಂದರೆ ಕೇವಲ ವಸ್ತುಗಳ ರೂಪದಲ್ಲಿಯೇ ಇರಬೇಕೆಂದಿಲ್ಲ. ಕಲ್ಯಾಣ ಚಾಲುಕ್ಯರ ಮೂರನೇ ಸೋಮೇಶ್ವರನ 'ಮಾನಸೋಲ್ಲಾಸ' ಗ್ರಂಥದಲ್ಲಿ "ಭೇದೋಪಾಯದಿಂದ

Please cite this article as: ಚನ್ನಾರಡ್ಡಿ. (2026). ಕಲ್ಲಕೆಳಗು ನಾಡಿನ ದಾನ–ದತ್ತಿ ಶಾಸನಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(2). ಪು.ಸಂ.* 55–60

ಸಾಧ್ಯವಾಗದೆ ಇದ್ದದ್ದು, ದಾನೋಪಾಯದಿಂದ ಸಿದ್ಧಿಸುತ್ತದೆ"[1]. ಸೋಮದೇವ ಸೂರಿಯು "ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರರ ಕರ್ತವ್ಯಗಳಲ್ಲಿ ದಾನಕ್ಕೆ ಪ್ರಾಶಸ್ತ್ಯವಿದೆ"[2] ಎಂದಿದ್ದಾನೆ. ಶುಕ್ರನೀತಿಯಲ್ಲಿ "ರಾಜ್ಯಾಡಳಿತದ ವೆಚ್ಚದಲ್ಲಿ ನಾಲ್ಕು ಪ್ರಧಾನ ಅಂಶಗಳಿದ್ದು, ಅವುಗಳಲ್ಲಿ ದಾನವೂ ಒಂದಾಗಿದೆ"[3]. ಹೀಗೆ ವಿವಿಧ ಗ್ರಂಥಗಳಲ್ಲಿ ದಾನದಿಂದ ಲಭಿಸುವ ಪುಣ್ಯ–ಪ್ರಾಪ್ತಿಗಳನ್ನು ಕಾಲಕಾಲಕ್ಕೂ ಸಾರುತ್ತಾ ಬಂದಿದ್ದಾರೆ. ದಾನ ಸ್ವೀಕರಿಸುವವನಿಗೆ 'ಪರಿಗ್ರಹಣ' ಎನ್ನುತ್ತಿದ್ದರು. ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಲ್ಲಿ ದಾನ ಕೊಡುವವರ ಮತ್ತು ದಾನ ಪಡೆದವರ ವಿವರಣೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಅಭಿಲಾಷಿತಾರ್ಥ ಚಿಂತಾಮಣಿಯಲ್ಲಿ "ಪೂರ್ವಾಷಾಢ, ಪೂರ್ವಬಾದ್ರಪದ, ಪೂರ್ವವೈಶಾಖ, ಕೃತ್ತಿಕಾ, ಭರಣಿ, ಆಶೇಷ, ಮಾಘ ಮತ್ತು ಮೂಲಾ ಇವು ಅಧೋಮುಖ ನಕ್ಷತ್ರಗಳಾಗಿದ್ದು, ಆ ಸಂದರ್ಭದಲ್ಲಿ ಒಳ್ಳೆಯ ಕಾರ್ಯಗಳ ಆರಂಭ ಮಾಡಬೇಕು"[4] ಎಂದು ದಾನ ಮಾಡುವಾಗ ಜ್ಯೋತಿಷ್ಯ, ಜಾತಕ, ವೇದ – ಶಾಸ್ತ್ರ – ಮಂತ್ರಗಳ ಸಮಯಾನುಸಾರಿಯಾಗಿ ನೋಡಲಾಗುತಿತ್ತು. ಇಂತಹ ಆಚಾರ–ವಿಚಾರ, ಸಂಪ್ರದಾಯಗಳು ಸಂಸ್ಕೃತಿಯ ಮುಖೇನ ಇಂದಿಗೂ ಉಳಿದುಕೊಂಡು ಬಂದಿವೆ.

ಕರ್ನಾಟಕದಲ್ಲಿ ದೊರೆತ ಬಹುಪಾಲು ದಾನ ಶಾಸನಗಳು ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿವೆ. ಕಲ್ಲಕೆಳಗು ನಾಡಿನಲ್ಲಿ ದೊರೆತ ಬಹುತೇಕ ಶಾಸನಗಳು ದಾನಕ್ಕೆ ಸಂಬಂಧಿಸಿದವು. ಸೂರ್ಯಗ್ರಹಣ, ಚಂದ್ರಗ್ರಹಣ, ಅಮವಾಸ್ಯೆ, ಹುಣ್ಣಿಮೆ, ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳ ಸಂದರ್ಭದಲ್ಲಿ ಗ್ರಾಮದ ಶಿವಾಲಯ, ಜಿನಾಲಯ ಅಥವಾ ವ್ಯಕ್ತಿಗಳಿಗೆ, ಗ್ರಾಮಗಳಿಗೆ ದಾನವನ್ನು ನೀಡಲಾಗಿದೆ. ಉಜ್ಜಲ್ಲಿಯ ಶಾಸನ – 1066, ಇಡ್ಲೂರು ಶಾಸನ – 1091 & 1115, ಅನಪೂರ ಶಾಸನ – 1126, ಮುಂತಾದವುಗಳಲ್ಲಿ ಕೆರೆದಾನ, ಗ್ರಾಮದಾನ, ಭೂಮಿದಾನಗಳ ಉಲ್ಲೇಖಗಳಿವೆ. ದಾನವನ್ನು ಮುಖ್ಯವಾಗಿ ಮಹಾಮಾಂಡಳೀಕ, ಮಹಾಸಾಮಂತ, ದಂಡನಾಯಕ, ಸಂಧಿವಿಗ್ರಹಿ, ಹೆಗ್ಗಡೆಗಳ ಸಮೂಹದಲ್ಲಿ ನೀಡಲಾಗಿದೆ.

ದಂಡನಾಯಕನ ಆಜ್ಞೆಯಂತೆ ಸಂಧೀವಿಗ್ರಹಿಗಳು ದೇವರಿಗೆ ಗ್ರಾಮವನ್ನು ದತ್ತಿಯಾಗಿ ನೀಡಿದ್ದನ್ನು "ದೇವ ಭೋಗ, ರಂಗಭೋಗ ಪಾತ್ರ ಪಾವುಳ ಖಂಡಸ್ಫುಟಿತ ಜೀರ್ಣೋದ್ಧಾರ..... ಸಗುರಿಂದಲಿ ಹಡುವಣ ಕೋಕುಂಬಾಳ ಧಾರಾಪೂರ್ವಕಂ ಮಾಡಿಕೊಟ್ಟರಾ ಗೋಡಂ ಮತ್ತರು 42, ನಿವೇದಕ್ಕಂ ನನ್ದಾದೀವಿಗೆಗೆ ಚೈತ್ರಪೈತ್ರಕ್ಕಂ ಮತ್ತರು 10, ಬ್ರಹ್ಮಪುರಿಯ ಬ್ರಾಹ್ಮಣರಿಗೆ ಮತ್ತರು 10, ಕಲಿಕುಟಿಗ ವೋಜುಗಳಿಗೆ ಮತ್ತರು 12, ಮತ್ತು ಗುರಿಂದಾಲ ವೋಜುಗಳಿಗೆ ಮತ್ತರು 10, ಪಾವುಳಕ್ಕೆ ಮತ್ತರು 10 ಈ ಧರ್ಮವನಾವನೋರ್ವ್ವನು ಪ್ರತಿಪಾಳಿಸಿದವರು"[5] (ಗುರುಜಾಲ ಶಾಸನ– ಕ್ರಿ.ಶ.1142) ದೇವಾಲಯದ ಅಂಗಭೋಗ–ರಂಗಭೋಗ, ಬ್ರಾಹ್ಮಣರಿಗೆ, ವೋಜರಿಗೆ ಎಂದು ಬಿಡಿಯಾಗಿ ಸ್ಪಷ್ಟವಾಗಿ ಉಲ್ಲೇಖಿಸಿದೆ.

---

[1] ಕಲ್ಯಾಣ ಚಾಲುಕ್ಯರ ದಾನ–ದತ್ತಿಗಳು ಒಂದು ಅಧ್ಯಯನ – ಡಾ.ಶಿವಯ್ಯ ಮಡಿವಾಳಯ್ಯ ಮಠ,2012,ಪು.ಸಂ.17

[2] ಅದೇ ಪು.ಸಂ.18

[3] ಅದೇ ಪು.ಸಂ.31

[4] ಕಲ್ಯಾಣ ಚಾಲುಕ್ಯರ ದಾನ–ದತ್ತಿಗಳು ಒಂದು ಅಧ್ಯಯನ – ಡಾ.ಶಿವಯ್ಯ ಮಡಿವಾಳಯ್ಯ ಮಠ,2012,ಪು.ಸಂ. ಪು.ಸಂ.79

[5] ಕಲ್ಲಕೆಳಗುನಾಡು – ಪಾಟೀಲ ಬಸನಗೌಡ ಎಸ್. ಹುಣಸಿಗಿ

ಒಂದು ಶಾಸನ ದೊರೆತಾಗ ಅದರಲ್ಲಿನ ಮಾಹಿತಿಯಿಂದ ಆ ಪ್ರದೇಶದಲ್ಲಿ ಸಮೃದ್ಧವಾಗಿರುವುದರ ಪ್ರಾಕೃತಿಕ ಅಥವಾ ಮೂಲಸೌಕರ್ಯಗಳ ಸ್ಥೂಲ ಮಾಹಿತಿ ದೊರೆಯುತ್ತದೆ. ಈ ಶಾಸನ ಅಂತಹ ಮಾಹಿತಿಯನ್ನು ದಾಖಲಿಸಿಲ್ಲ. ಗ್ರಾಮವನ್ನು ದಾನವಾಗಿ ನೀಡಿದ್ದನ್ನು ಮಾತ್ರ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ಶಾಸನದಲ್ಲಿ ಊರಿನ ಗ್ರಾಮ ದೇವರು ರಾಮೇಶ್ವರ ದೇವಾಲಯದ ಸೇವೆಗೆ ಕೋಕುಂಬಾಳ ಎಂಬ ಗ್ರಾಮವನ್ನು ದತ್ತಿಯಾಗಿ ಮಹಾಪ್ರಧಾನ ದಂಡನಾಯಕ ಕೇಸಿಮಯ್ಯನ ಆಜ್ಞೆಯಂತೆ ಇವನ ಮಗನಾದ ಚೀಯಮರಸನು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ.

"ಉಜ್ಜಿವೊಳಲ ಕೋಟಿಯೊಳಗಣ ಬಸದಿ
ಶ್ರೀಮದ್ರಾವಿಳಸಂಗದ ಸೇನಗಣದ ಕೌರೂರ್ಗ್ಗಚ್ಛದ ಬದ್ದಿಜಿನಾಲಯದ ಚೆಂನ್ನಪಾ
ರ್ಶ್ವದೇವರ ಅಂಗಭೋಗಕ್ಕ ನಿವೇದ್ಯ ದೀಪ ಧೂಪ ತಾಂಬೂಳಕ್ಕ ಬಂದ
ಹೋದ ರಿಶಿಯರ ಅಜ್ಜಿಯರ ಆಹಾರದಾನಕ್ಕಂ ಸೌಧೆ ಸುಣ್ಣ ಜೀಣೋರ್ದ್ಧಾರಕ್ಕಂ ಶ್ರೀ
ವಾದೀರಾಜಾನ್ವಯದ ವಾದೀರಾಜದೇವರ ಶಿಶ್ಯರಪ್ಪ ಅಲ್ಲಿಯ ಆಚಾರ್ಯರು ಇಂದ್ರಸೇನ
ಪಂಡಿತದೇವರ ಕಾಲಂಕರ್ಚ್ಚಿ ಧಾರಾಪೂರ್ವಕಂ ಮಾಡಿ ಉಜ್ಜಿವೊಳಲ ಪಡುವಣ ಸೀಮೆಯೊಳ
ಗೆ ಬದ್ದಿಪಳ್ಳಿಯಿಂ ಬಡಗಲು ಕೊಟ್ಟ ಕೆರೆ ಒಂದು ಕೆಯಿ ಮತ್ತರ್ಪ್ಪಂನೆ 12 ಸಿನೆಯ ತ
ಯಲು ಹೂವಿನ ತೋಂಟ ಮತ್ತ ಕಮ್ಮ 500 ಅಶೇಷ ನಗರಂಗಳು ದೇವಗ್ಗೆರ್ ಅಜ್ಜಿನ ಕಂಮತೆ
ದಲು ದಳಕೆ ಹಾರ ಒಂದ ಬಿಟ್ಟರು ದೀವಿಗೆಗೆ ಗಾಣ ಒಂದು ಅಶೇಷ ನಕರ ಹೊನ್ನವಣ ಹೇರಿಂಗೆ
100 ಎಲೆಯಂ ಬಿಟ್ಟರು ಇನ್ತೀ ಧರ್ಮ್ಮಮಂ ಬ್ರತಿಪಾಳಿಸುವರು ಸೌಧರೆ ಮಲ್ಲಪಯ್ಯನಾಯಕರುಂ ಸೌ
ಧರೆ ಪ್ರೋಲೆಯನಾಯಕನುಂ ಸೌಧರೆ ಕೂಚೆಯನಾಯಕನುಂ ಅಶೇಷನಕರಂಗಳು ಸಮೆಯಂ
ಗಳುಂ ಪಂಚಮಠಸ್ಥಾನಗಳು ಇನ್ತೀ ಧರ್ಮ್ಮಮಂ ಪ್ರತಿಪಾಳಿಸುವರು" [6] (ಉಜ್ಜಲ್ಲಿ ಶಾಸನ–ಕ್ರಿ.ಶ.1066)

ಶಾಸನದಲ್ಲಿ ಉಲ್ಲೇಖಿಗೊಂಡಿರುವ ಕೆರೆ ಈಗಲೂ ಕಂಡು ಬರುತ್ತದೆಯಾದರೂ ಸುತ್ತಲಿನ ಭಾಗ ಉಳುಮೆಯಿಂದ ಅತೀ ಕ್ರಮಿಸಲ್ಪಟ್ಟು ನಡುಭಾಗ ಮಾತ್ರ ನೀರಿಗಾಗಿ ಆಳವಾಗಿ ತೋಡಲ್ಪಟ್ಟಿದೆ. ಈ ಕೆರೆಯ ಕುರಿತು ಉಜ್ಜಲ್ಲಿಯಲ್ಲಿ ಹಲವು ಶಾಸನಗಳು ದೊರೆತಿದ್ದು, 'ಶ್ರೀಮದ್ರಾವಿಳ ಸಂಘದ ಸೇನಗಣದ ಕಾರಂಗಚ್ಚದ ಬದ್ದಿ ಜಿನಾಲಯ'[7] ಎಂದು ಅಲ್ಲಿನ ಜಿನಾಲಯ ಮತ್ತು ಜೈನ ಧರ್ಮದ ಕುರಿತು ದಾಖಲಿಸಿದೆ. ಶಾಸನದಲ್ಲಿ 'ಅಜ್ಜಿಯರ ಆಹಾರದಾನಕ್ಕಂ' ಎಂದಿದ್ದು "ಜೈನ ಬಸದಿಗಳ ಆಹಾರ ದಾನವು ಋಷಿಯರಿಗೆ ಮತ್ತು ಅಜ್ಜಿಯರಿಗೆ ಮಾತ್ರ ಮೀಸಲಾಗಿತ್ತು ಎಂದು ತಿಳಿಯುತ್ತದೆ. ಮಠಗಳಾಗಲಿ, ಶಾಲೆಗಳಾಗಲಿ ಬಸದಿಗಳ ಆಹಾರ ವಿತರಣೆಯ ಜೊತೆಗೆ ಸಂಬಂಧ ಹೊಂದಿರಲಿಲ್ಲ."[8]

---

[6] ಕಲ್ಲಕೆಳಗುನಾಡು – ಪಾಟೀಲ ಬಸನಗೌಡ ಎಸ್. ಹುಣಸಿಗಿ

[7] ಕಲ್ಯಾಣ ಚಾಲುಕ್ಯರ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ – ಎಚ್.ಎಸ್.ಗೋಪಾಲರಾವ್,1993,ಪು.ಸಂ.215

[8] ಅದೇ ಪು.ಸಂ.214

ರಾಜರು ಧರ್ಮನಿಷ್ಠರು, ಸಹಿಷ್ಣುಗುಣಿಗಳೂ ಆಗಿದ್ದರಿಂದ ಕನ್ನಡ ನಾಡಿನಲ್ಲಿ ಇಂತಹ ಹಲವಾರು ಕಾರ್ಯಕ್ಕೆಗೊಂಡು ಶಾಸನಗಳನ್ನು ಹಾಕಿಸಿದ್ದಾರೆ. 'ಧರ್ಮನು ದೃಷ್ಟದೃಷ್ಟಸುಖದಾಮಿ' ಎಂಬುದು ಹಿಂದಿನ ಕಾಲದ ನಂಬಿಕೆಯಾಗಿತ್ತು. ಜನರ ಸುಖ ಶಾಂತಿಯನ್ನು ಕಾಪಾಡುವ ಸಲುವಾಗಿ ಎಲ್ಲಾ ಧರ್ಮಗಳನ್ನೂ ರಾಜನು ಸಮಾನವಾಗಿ ಕಾಣಬೇಕಾಗುತ್ತಿತ್ತು. ಕೆಲವೊಮ್ಮೆ ಧರ್ಮಗಳ ಮಧ್ಯೆ ಸಮಸ್ಯೆಗಳು ಉದ್ಭವಿಸಿದಾಗ ಸರಿಯಾದ ರೀತಿಯಲ್ಲಿ ಬಗೆಹರಿಸಿದ ಉದಾಹರಣೆಗಳು ಇವೆ. ಕಲ್ಲಕೆಳಗು ನಾಡಿನಲ್ಲಿ ಇರುವ ಜಿನಾಲಯಗಳಲ್ಲಿ ಪಾರ್ಶ್ವನಾಥನ ಮೂರ್ತಿಗಳು ಅಧಿಕವಾಗಿ ದೊರೆತಿವೆ. ಕಪಟರಾಳ ಕೃಷ್ಣರಾಯರವರು ಗುರುತಿಸಿದ ಹಾಗೆ ಈ ಭಾಗದಲ್ಲಿ ಲಾಕುಳ ಮತ್ತು ಕಾಪಾಲಿಕ ಶೈವರ ಪ್ರಭಾವ ತುಂಬಾ ಗಾಢವಾಗಿ ಆಗಿದ್ದರೂ ಶೈವರು ಬರುವುದಕ್ಕೆ ಮೊದಲೇ ಇಲ್ಲಿನ ಜನರು ಜೈನ ಧರ್ಮದ ಪ್ರಭಾವಕ್ಕೆ ಒಳಗಾಗಿದ್ದರು ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಹೀಗಾಗಿ ದಾನ, ಧರ್ಮದ ಗುಣಗಳು ಜನಜೀವನದ ಮೇಲೆ ಪ್ರಭಾವ ಬೀರಿದ ಮತ್ತು ಬೀರುತ್ತಿರುವ ಅತ್ಯಮೂಲ್ಯ ಮೌಲ್ಯಗಳಾಗಿವೆ. ದಾನಗಳಲ್ಲಿ ಯಾವುದೇ ಮತಧರ್ಮಗಳನ್ನು ಕಾಣಲಾಗುವುದಿಲ್ಲ ಏಕೆಂದರೆ ಕೊಟ್ಟ ದಾನದ ಕುರಿತು ಹೇಳಿಕೊಳ್ಳಬಾರದು ಎಂಬ ನಂಬಿಕೆ ಜನರಲ್ಲಿದ್ದು, ಶಾಸನಗಳಲ್ಲಿನ ಶಿಲ್ಪ, ರೇಖಾಚಿತ್ರ, ಸಾಂದರ್ಭಿಕ ಚಿತ್ರಗಳಿಂದ ಮತಧರ್ಮಗಳನ್ನು ಗುರುತಿಸಲಾಗುತ್ತದೆ.

ಕಲ್ಲಕೆಳಗು ನಾಡಿನ ಶಾಸನಗಳಲ್ಲಿ ಮುಖ್ಯವಾದದ್ದು ಬದ್ದೇಪಲ್ಲಿ ಶಾಸನ. ಇದರ ಕಾಲ 1092 ಆಗಿದ್ದು, ಆರನೇ ವಿಕ್ರಮಾದಿತ್ಯನಿಗೆ ಸಂಬಂಧಿಸಿದೆ. ಇದು ಉಜ್ಜಲ್ಲಿಯ ಜಿನಾಲಯಕ್ಕೆ ಸೋಮರಸ ಪಾರ್ಶ್ವಶೆಟ್ಟಿ ಹೆಗ್ಗಡೆಯು ದತ್ತಿ ನೀಡಿದ್ದನ್ನು ತಿಳಿಸುತ್ತದೆ. "ಸೋಮಗ್ರಹನ ನಿಮಿತ್ತದಿಂ ನಗರ ಜಿನಾಲಯಕ್ಕೆ ನಿವೇದ್ಯಕ್ಕಂ ನಂದಾದಿ ಬಿಜದಿಂ ಯಾಬ್ದಿವೊಳಲ ಅಚ್ಚಿನ ಕಮ್ಮಟದಲು ಹಾಗದ ಬೇಳೆಯಂ ಕೊಟ್ಟರು ಈ ಧರ್ಮವಂ ಪ್ರತಿಪಾಲಿಸಿದವರು ಗಂಗೆಯ ತಡಿಯಲು ಸಾಸಿರ ಕವಿಲೆಯಂ ದೇವ ಬ್ರಾಹ್ಮಣರಿಗೆ ದಾನಂ ಗೊಟ್ಟ ಫಲವಕ್ಕು"[9] ಎಂದಿದೆ. ಇದು ನೈವೇದ್ಯಕ್ಕೆ ಎಣ್ಣೆ, ತುಪ್ಪ, ಹಣದ ರೂಪದಲ್ಲಿ ದತ್ತಿಯಾಗಿ ದವಸ–ಧಾನ್ಯ, ಬೆಳೆಗಳನ್ನು ದಾನವಾಗಿ ಕೊಟ್ಟರು ಎಂದು ತಿಳಿಸುತ್ತದೆ. ಮುಖ್ಯವಾಗಿ "ಸಂತೆ ಪೇಟೆಗಳಲ್ಲಿ ಬಂದ ವಿವಿಧ ಸರಕುಗಳನ್ನು ಖರೀದಿಸಿ ಬಯಲು ಅಂಗಡಿ ಮತ್ತು ಮಳಿಗೆಗಳನ್ನಿಟ್ಟು ಮಾರಾಟ ಮಾಡುತ್ತಿದ್ದರು."[10] ಇದನ್ನು "ನಗರ್ತ" ಎಂದು ಶಾಸನದಲ್ಲಿ ಕರೆಯಲಾಗಿದೆ. ಅಂತ ವ್ಯಾಪಾರಿ ಸಮೂಹದವರು ಜಿನಾಲಯದ ನೈವೇದ್ಯಕ್ಕೆ ದಾನ ನೀಡಿದ್ದನ್ನು ಹೇಳುತ್ತದೆ. ಕಲ್ಲಕೆಳಗುನಾಡಿನ ದಂಡನಾಯಕ ಕನ್ನಪಯ್ಯನು ದಾನವನ್ನು ಮತ್ತು ಪೂರ್ವದಲ್ಲಿ ಕಲ್ಲಕೆಳಗುನಾಡಿನ ರಾಜಧಾನಿ ಉಜ್ಜಲ್ಲಿಯು ಪ್ರಮುಖ ಟಂಕಸಾಲೆ ಆಗಿದ್ದು, ಅಲ್ಲಿಯ ಪೆರ್ಗಡೆ ಪಾರ್ಶ್ವಶೆಟ್ಟಿಯು ಜಿನಾಲಯಕ್ಕೆ ಅಲ್ಲಿ ಟಂಕಿಸಿದ ಚಿನ್ನದ ನಾಣ್ಯಗಳನ್ನು ನೀಡಿದ್ದನ್ನು ದಾಖಲಿಸುತ್ತದೆ. ದಾನಿಗಳಿಗೆ ದಾನ ಮಾಡುವ ಮನಸ್ಸಿದ್ದರೆ ಅವರು ಚಿನ್ನದ ನಾಣ್ಯ, ಬೆಳೆಗಳ ರೂಪದಲ್ಲಿಯೂ ದಾನ ಮಾಡುತ್ತಿದ್ದರು. ಮುಖ್ಯವಾಗಿ ಕೆಲವು ವೇಳೆ ದಾನ–ದತ್ತಿಗೆ ಅವರಲ್ಲಿ ಭೂಮಿ ಇಲ್ಲದಿದ್ದರೆ ದೇವಾಲಯಕ್ಕೆ ಸೇರಿದ ಭೂಮಿಯನ್ನೆ ಹಣ ಕೊಟ್ಟು ಖರೀದಿಸಿ ಮತ್ತೆ ದೇವಾಲಯಕ್ಕೆ ದಾನವಾಗಿ ನೀಡುತಿದ್ದರು.

[9] ಶಾಸನೋಕ್ತ–ಸಂಸ್ಕೃತಿ ದರ್ಶನ – ಪಾಟೀಲ ಬಸನಗೌಡ ಎಸ್. ಹುಣಸಗಿ,2018,ಪು.ಸಂ.52

[10] ಕಲ್ಲಕೆಳಗುನಾಡು – ಪಾಟೀಲ ಬಸನಗೌಡ ಎಸ್. ಹುಣಸಿಗಿ

"ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸು..... ಎಂಬಂತೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಲಕೇರಿ, ನೀರಲಗಿ, ಕೈದಾಳ, ಬಾಗೂರು, ಆಲಹಳ್ಳಿ, ಆಲಂಪುರ ಮುಂತಾದ ಕಡೆಗಳಲ್ಲಿ ಕೆರೆ, ಬಾವಿಗಳು ನಿರ್ಮಾಣವಾಗಿದ್ದು, ಅವುಗಳಲ್ಲದೆ ಬೇರೆ ಕಡೆಗೂ ಜೀರ್ಣೋದ್ಧಾರದ ಕಾರ್ಯವನ್ನು ಇವರ ಕಾಲದಲ್ಲಿ ಮಾಡಲಾಗಿದೆ. ಕಲ್ಲಕೆಳಗು ನಾಡಿನಲ್ಲಿ ಕೆರೆಯನ್ನು ದಾನವಾಗಿ ಬಿಟ್ಟದ್ದು ಎರಡು ಶಾಸನಗಳು(ಉಜ್ಜಲ್ಲಿ, ಬದ್ದೇಪಲ್ಲಿ ಶಾಸನಗಳು) ಸ್ಪಷ್ಟವಾಗಿ ಉಲ್ಲೇಖಿಸುತ್ತವೆ. ಹೀಗೆ ಇತರ ಶಾಸನಗಳು ದಾನ–ದತ್ತಿಯಾಗಿ ಬಿಟ್ಟ ಮಾಹಿತಿಯನ್ನು ತಿಳಿಸಿಕೊಡುತ್ತವೆ. ಒಟ್ಟಾಗಿ ಹೇಳುವುದಾದರೆ, ದಾನ ಶಾಸನಗಳಿಂದ ಭೌಗೋಳಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕ ಅಂಶಗಳನ್ನು ತಿಳಿದುಕೊಳ್ಳಲು ಸಹಾಯಕವಾಗಿವೆ. ಆಡಳಿತಾಧಿಕಾರಿಗಳು ತೆರಿಗೆಗಳಿಂದ ವಿನಾಯ್ತಿಯನ್ನು ನೀಡುತ್ತಿದ್ದುದು ಒಂದು ರೀತಿಯಲ್ಲಿ ಜನರ ಮೇಲಿನ ಕಾಳಜಿಯಾಗಿರುತ್ತಿತ್ತು. ಅದೇ ಕಾಲದಲ್ಲಿನ ಬಸವಣ್ಣನವರು ಇಂತಹ ತಾರತಮ್ಯವನ್ನು ಕಂಡು ಅದನ್ನು ತೋಲಗಿಸಲೆಂದು ಮತ್ತು ದಾನಪಡೆದವರಿಗೂ–ದಾನನೀಡಿದವರಿಗೂ ಯಾವ ಭೇದ ಕಂಡುಬರದಂತೆ ಎಲ್ಲರನ್ನು ಒಳಗೊಂಡಂತೆ "ದಾಸೋಹ ಪರಿಕಲ್ಪನೆ"ಯನ್ನು ರೂಢಿಗೆ ತಂದರು.

ಹೀಗೆ ದಾನ ಮಾಡಿರುವ ಮತ್ತು ಪಡೆದುಕೊಂಡಿರುವ ಅಥವಾ ಮಧ್ಯವರ್ತಿಗಳನ್ನು ಶಾಸನಗಳು "ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ" ಎಂಬುದಾಗಿ ಕರೆದುದು ಕಂಡು ಬರುತ್ತದೆ. ಅಲ್ಲದೆ, ಮತೀಯ ವಿರಸಗಳು "ಅಬ್ಬಲೂರಿನ ಏಕಾಂತ ರಾಮಯ್ಯನ ಶಾಸನ, ಶಾಬನೂರಿನ ಶಾಸನ–1128"[11] ಇನ್ನೂ ಹಲವು ಶಾಸನಗಳು ಶೈವ ಮತವೇ ಶ್ರೇಷ್ಠ, ಜೈನ ಮತವೇ ಶ್ರೇಷ್ಠ ಎಂದು ಅನ್ಯ ಮತಗಳನ್ನು ಹೀಯಾಳಿಸಿದ್ದನ್ನು ಕಾಣುತ್ತೇವೆ. ಆದರೆ ಹತ್ತು–ಹನ್ನೊಂದನೇ ಶತಮಾನದಲ್ಲಿ ಶೈವ–ಜೈನ ಮತಗಳ ನಡುವೆ ಸಂಘರ್ಷವಿದ್ದುದ್ದನ್ನು ಸಾಹಿತ್ಯಕ ಮತ್ತು ಶಾಸನಗಳಲ್ಲಿ ಕಾಣುತ್ತೇವೆ. ಈ ಪ್ರದೇಶದಲ್ಲಿ ದೊರೆತ ಶಾಸನಗಳಲ್ಲಿ ಅಂತಹ ಮಾಹಿತಿ ಕಾಣಲಾಗುವುದಿಲ್ಲ. ಒಟ್ಟಾರೆಯಾಗಿ ದೊರೆತ ಶಾಸನಗಳಲ್ಲಿ ಕೆಲವು ಸುಳುವು ರೀತಿಯ, ಸಾಂದರ್ಭಿಕವಾಗಿ ಬಿಡಿಸಿದ ಚಿತ್ರಗಳು ಕಂಡುಬರದೆ, ಸಾಮಾನ್ಯವಾಗಿ ಆಯಾ ಧರ್ಮಗಳಿಗೆ ಸಂಬಂಧಿಸಿದ ರೇಖಾಚಿತ್ರಗಳು ಕಂಡುಬರುತ್ತವೆ. ಶಾಸನಗಳ ಬಹುಭಾಗಗಳು ಹಾಳಾಗಿ, ಕೆಲವು ಅಕ್ಷರಗಳು ತ್ರುಟಿತಗೊಂಡು ಗುರುತಿಸದಷ್ಟು ಹಾಳಾಗಿದ್ದು, ಅಳಿದುಳಿದಂತಹ ಭಾಗದ ಮಾಹಿತಿಯನ್ನು ಕಲೆಹಾಕಲಾಗಿದ್ದು, ಇನ್ನೂ ಈ ಭಾಗದಲ್ಲಿ ಕ್ಷೇತ್ರಕಾರ್ಯದ ಅಗತ್ಯತೆ ಇದೆ.

ಪರಾಮರ್ಶನ ಗ್ರಂಥಗಳು

- ಭೀಮರಾಯ ಲಿಂಗೇರಿ – ಯಾದಗಿರಿ ಒಂದು ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ. ಗುಲ್ಬರ್ಗಾ ವಿ.ವಿ. ಗುಲ್ಬರ್ಗಾ
- ಚನ್ನಬಸವಯ್ಯ ಹಿರೇಮಠ. (2014). *ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು.* ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

[11] ಕಲ್ಯಾಣ ಚಾಲುಕ್ಯರ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ – ಎಚ್.ಎಸ್.ಗೋಪಾಲರಾವ್,1993,ಪು.ಸಂ.197

- ಚಿದಾನಂದ ಮೂರ್ತಿ, ಎಂ. (2016). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್ ಹೌಸ್, ಬೆಂಗಳೂರು.
- ಗಣೇಶ, ಕೆ.ಆರ್. (1994). *ಆಂಧ್ರ ಪ್ರದೇಶದ ಕನ್ನಡ ಶಾಸನಗಳು: ಒಂದು ಅಧ್ಯಯನ.* ಶ್ರೀಕೃಷ್ಣ ದೇವರಾಯ ವಿ.ವಿ. ಅನಂತಪುರ.
- ಗೋಪಾಲರಾವ್, ಎಚ್.ಎಸ್. (1993). *ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಅಧ್ಯಯನ.* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.
- ಹನುಮಾಕ್ಷಿ ಗೋಗಿ. (2002). *ಅನುಶಾಸನ.* ಮಹಿಳಾ ಸಾಹಿತ್ಯಿಕಾ, ನವನಗರ, ಹುಬ್ಬಳ್ಳಿ.
- ಕಡಪಟ್ಟಿ, ಎಮ್.ಎನ್. (2008). *ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ.* ಕ.ಇ.ಸಂ.ಮಂಡಲ.
- ಕಪಟರಾಳ ಕೃಷ್ಣರಾಯ. (1955). *ಕರ್ನಾಟಕ ಲಾಕುಳಶೈವರ ಇತಿಹಾಸ.* ಕ.ಸಂ.ಸಂಸ್ಥೆ. ಧಾರವಾಡ.
- ಪಾಟೀಲ ಬಸನಗೌಡ ಎಸ್. ಹುಣಸಿಗಿ. (2018). *ಶಾಸನೋಕ್ತ–ಸಂಸ್ಕೃತಿ ದರ್ಶನ.* ಕ.ಸಾ.ಪ. ಯಾದಗಿರಿ.
- ರಮೇಶ ನಾಯಕ. (2023). *ಕರ್ನಾಟಕ ದೇವಾಲಯ ಕೋಶ ಯಾದಗಿರಿ ಜಿಲ್ಲೆ.* ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
- ಶಿರೂರ, ಬಿ.ವಿ. (2021). ಸಂಶೋಧನ ಸ್ವರೂಪ. ಅನ್ನಪೂರ್ಣ ಪ್ರಕಾಶನ.